ಅಧಿಕೃತವಾದ ಮಾತ್ರೆ ಹಾಗೂ ಔಷಧಿಗಳನ್ನು, ಅನಧಿಕೃತವಾಗಿ ಅವೈದ್ಯಕೀಯ ಕಾರಣಗಳಿಗೆ ಬಳಸುವವರು. ಉದಾಹರಣೆಗೆ, ಮತ್ತೇರಿಸಿಕೊಳ್ಳಲು, ನಿದ್ರಿಸಲು ಅಥವಾ ಸುಖಾನುಭೂತಿ ಅನುಭವಿಸಲು! ಇದು ಕೂಡಾ **prescription drug abuse** ಪಟ್ಟಿಯಲ್ಲೇ ಸೇರಿಕೊಳ್ಳುತ್ತದೆ.

### ಇದು ಸಣ್ಣ ಸಮಸ್ಯೆಯಲ್ಲ!

ಈ ರೀತಿ ವೈದ್ಯಕೀಯ ಔಷಧೀಯ ದುರ್ಬಳಕೆಯ ವ್ಯಾಪ್ತಿ ಜಗತ್ತಿನ ಉದ್ದಗಲಕ್ಕೂ ಹರಡುತ್ತಿದೆ. ಬೆರಗು ಹುಟ್ಟಿಸುವ ಪ್ರಮಾಣದಲ್ಲಿ ಏರಿಕೆ ಆಗುತ್ತಿದೆ ಎನ್ನುವುದು ವೈದ್ಯಲೋಕಕ್ಕೆ ಆತಂಕ ತಂದಿರುವ ವಿಷಯ. ಜಗತ್ತಿಗೇ ದೊಡ್ಡಣ್ಣ ಎನಿಸಿಕೊಂಡಿರುವ ಅಮೆರಿಕಾ ಒಂದರಲ್ಲೇ 2011ರಲ್ಲಿ ನಡೆಸಿದ ರಾಷ್ಟ್ರೀಯ ಸಮೀಕ್ಷೆಯ ಪ್ರಕಾರ, 14.70 ಕೋಟಿ ಅಮೆರಿಕನ್ನರು ಈ ರೀತಿ ಔಷಧಿಯ ದುರ್ಬಳಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅದರಲ್ಲೂ ನೋವು ನಿವಾರಕ ಔಷಧಿಗಳ ದುರ್ಬಳಕೆ ಅತ್ಯಧಿಕ ಪ್ರಮಾಣದಲ್ಲಿದೆ. ಇದಲ್ಲದೆ ನಿದ್ದೆ ಮಾತ್ರೆಗಳು, ಪ್ರಚೋದಕ ಮಾತ್ರೆಗಳು (ಹದಿಹರೆಯದ ಮಕ್ಕಳಲ್ಲಿ ಅತಿಚಟುವಟಿಕೆ ಹಾಗೂ ಗಮನ ಕುಂದುವಿಕೆಯ ಕಾಯಿಲೆ – –**attention deficit and hyperactivity disorder –ADHD** ಎಂಬ ಕಾಯಿಲೆಗೆ ಕೊಡುವ ಪ್ರಚೋದಕ ಮದ್ದುಗಳು) ಅತಿಯಾಗಿ ದುರ್ಬಳಕೆ ಆಗುತ್ತಿವೆ. 18ರಿಂದ -25 ವರ್ಷ ವಯಸ್ಸಿನ ಯುವಜನರಲ್ಲೇ ಇದರ ಬಳಕೆ ಅತಿಯಾಗಿ ಕಂಡು ಬಂದಿದೆ. 12–17 ವರ್ಷ ವಯಸ್ಸಿನವರಲ್ಲಿ ಮತ್ತು 26 ವರ್ಷ ಮೇಲ್ಪಟ್ಟ ವಯಸ್ಕರಲ್ಲಿಯೂ ಔಷಧೀಯ ದುರ್ಬಳಕೆಯ ಪ್ರಮಾಣ ಅತ್ಯಧಿಕವಾಗಿಯೇ ಇದೆ.

ಈ ರೀತಿ ಔಷಧಿಗಳ ದುರ್ಬಳಕೆ ಮಾಡುವವರಲ್ಲಿ ಗಂಡಸರ ಪ್ರಮಾಣ ಹೆಚ್ಚು ಎನ್ನುವುದು ಕುತೂಹಲಕರ. ಹದಿ ಹರೆಯದವರಲ್ಲಿ ಹೆಚ್ಚಾಗಿ ಹೆಣ್ಣುಮಕ್ಕಳೇ ಇದಕ್ಕೆ ಬಲಿಯಾಗುತ್ತಿರುವುದು ಆತಂಕಕಾರಿ. ಹದಿಹರೆಯದವರಲ್ಲಿ ಈ ರೀತಿ ವೈದ್ಯರು ಕೊಡುವ ಮಾತ್ರೆಗಳ ಜೊತೆಗೆ ಇತರ ಮಾದಕ ಪದಾರ್ಥಗಳಿಗೂ (ಮದ್ಯಪಾನ, ಮಾರಿಜುವಾನಾ, ಗಾಂಜಾ ಇತ್ಯಾದಿ) ಇಂತಹವರು ವ್ಯಸನಿಗಳಾಗಿರುವುದು ಕಂಡು ಬಂದಿದೆ.

'ಇದೆಲ್ಲ ದೂರದ ಅಮೆರಿಕದಲ್ಲಿ ಆಗುತ್ತಿರುವ ಹುಚ್ಚುತನ, ನಮ್ಮಲ್ಲೇನೂ ಹಾಗಿಲ್ಲಪ್ಪಾ..' ಎಂದು ನಿರಾಳವಾಗಿ ಇರುವ ಹಾಗಿಲ್ಲ. ಸಾಮಾಜಿಕ, ಸಾಂಸ್ಕೃತಿಕ ಕಟ್ಟಳೆಗಳನ್ನು ಬೇಧಿಸಿ ಈ ರೀತಿಯ ದುರ್ಬಳಕೆಯ ಹಾವಳಿ ಇಂದು ನಮ್ಮಲ್ಲೂ ಸಾರ್ವತ್ರಿಕವಾಗಿದೆ. ಸಾಮಾನ್ಯ ಗೃಹಿಣಿಯಿಂದ ಹಿಡಿದು, ಶ್ರೀಮಂತ ಉದ್ಯಮಿಯವರೆಗೆ, ಕಾಲೇಜಿನ ಪಡ್ಡೆ ಹುಡುಗರ ಗ್ಯಾಂಗ್‌ನಿಂದ ಹಿಡಿದು ಬೀದಿಯಲ್ಲಿ ಕಸ ಹೆಕ್ಕಿ ಬದುಕುವ ಸ್ಲಮ್ ಹುಡುಗರವರೆಗೆ ಎಲ್ಲರನ್ನೂ ಔಷಧೀಯ ದುರ್ಬಳಕೆ ಇದೀಗ ತನ್ನ ತೆಕ್ಕೆಯಲ್ಲಿ ತೆಗೆದುಕೊಂಡಿದೆ.

2001ರಲ್ಲಿ ಮೊತ್ತ ಮೊದಲ ಬಾರಿಗೆ ರಾಷ್ಟ್ರೀಯ ಮಟ್ಟದಲ್ಲಿ ನಡೆಸಿದ

## ಕಾನೂನು ಹಾಗೂ ಮಾತ್ರೆಗಳು

ಮಾತ್ರೆಗಳ ವಿಭಜನೆ: ಅಂತರಾಷ್ಟ್ರೀಯ Drug Enforcement Agency ಎನ್ನುವ ಅಂತರಾಷ್ಟ್ರೀಯ ಸಂಸ್ಥೆ ಎಲ್ಲಾ ಔಷಧಿಗಳನ್ನು, ಅವುಗಳ ದುಷ್ಪರಿಣಾಮ ಬೀರಬಲ್ಲ ಕ್ಷಮತೆ, ದುರ್ಬಳಕೆ ಆಗುವ ಸಾಧ್ಯತೆ, ಹಾಗೂ ಸಾಮಾಜಿಕ ಜೀವನಕ್ಕೆ ಆಗುವ ತೊಂದರೆಯನ್ನು ಪರಿಗಣಿಸಿ, ಬೇರೆ ಬೇರೆ Scheduleನಲ್ಲಿ ವಿಭಜಿಸುತ್ತದೆ.

**Schedule I drugs**

ಸಂಶೋಧನೆಗೆ ಮಾತ್ರ ಬಳಸತಕ್ಕದು; ವೈದ್ಯಕೀಯ ಉಪಯೋಗಕ್ಕೆ ಬಳಸುವಂತಿಲ್ಲ

**Schedule II drugs**

ವೈದ್ಯಕೀಯ ಸೂಚನಾ ಚೀಟಿ ಬರೆದು, ಒಂದು ಬಾರಿಯಷ್ಟೇ ತೆಗೆದುಕೊಳ್ಳುವಂತದ್ದು

**Schedule III/IV drugs**

ವೈದ್ಯಕೀಯ ಚೀಟಿ ಇದ್ದರೆ ಸಾಕು
ಬಾಯಲ್ಲಿ ಡಾಕ್ಟರ್ ಆದೇಶಿಸಿದರೂ ಆಗಬಹುದು
ಆರು refills ಮಾಡಬಹುದು
(ಆರು ತಿಂಗಳಿಗೆ)

**Schedule V/VI drugs**

ಚೀಟಿ ಇಲ್ಲದೆಯೂ medical shop ಗಳಲ್ಲಿ ಲಭ್ಯವಿರುವವು.

ಭಾರತದ Drugs and Cosmetics Acts 1940, ಹೆಚ್ಚು ಕಡಿಮೆ ಇದೇ ರೀತಿಯ Schedule ಅನ್ನು ಅನುಸರಿಸುತ್ತದೆ. ಸುಮಾರಾಗಿ Schedule A-Yವರೆಗೆ ಎಲ್ಲಾ ಮಾತ್ರೆಗಳನ್ನು ಅಳವಡಿಸಿಕೊಂಡಿದೆ. ಇದರಲ್ಲಿ Schedule 'G' ಅಥವಾ Schedule 'H' ಅನ್ನುವ ಅಂಕಿತ ಇರುವ ಮಾತ್ರೆಗಳನ್ನು ವೈದ್ಯಕೀಯ ನಿಗ್ರಹಣೆಯಲ್ಲೇ ಬಳಸತಕ್ಕದ್ದು. ಇದರ ಬಗ್ಗೆ ರೋಗಿ/ ಗ್ರಾಹಕರ ಗಮನ ಇರಬೇಕು. ಕಾನೂನಿನ ಕಡಿವಾಣ ಇದ್ದರೂ, ಭಾರತದಲ್ಲಿ ಜಗತ್ತಿನ ಬೇರೆಡೆ ಬಹಿಷ್ಕರಿಸಲ್ಪಟ್ಟ ಎಷ್ಟೋ ಮದ್ದುಗಳು, ಅಧಿಕೃತವಾಗಿಯೂ, ಅನಧಿಕೃತವಾಗಿಯೂ ಲಭ್ಯವಿವೆ ಎಂಬುದೂ ಚಿಂತಾರ್ಹ ಹಾಗೂ ಜ್ವಲಂತ ವಿಷಯವಾಗಿದೆ.


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬೆಂಗಳೂರು. 9620444460